aglasem.com

FOR KARNATAKA 2ND PUC EXAM PREPARATION

Karnataka 2nd PUC 2027 Sample Paper · Optional Kannada

EXAM	YEAR	TYPE	SUBJECT
Karnataka 2nd PUC	2027	Sample Paper	Optional Kannada

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

2026-27 ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 1

ವಿಷಯ: ಐಚ್ಛಿಕ ಕನ್ನಡ **ಗರಿಷ್ಠ ಅಂಕಗಳು: 80**

ಸಮಯ: 03 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 48**

ಸೂಚನೆ:-ವಿಭಾಗ 'ಅ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ-ವಿಭಾಗ

I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ. **5x1-5**

1. ನೀಳಾಂಜನೆಯ ಪ್ರತಿಸೃಷ್ಟಿ ಅರಿವಾದುದು ಈತನಿಗೆ.

   ಅ) ಆದಿದೇವ ಆ) ನಾಭಿರಾಜ

   ಇ) ಹರಿಕಾಂತ ಈ) ಅಕಂಪನ

2. ಅರ್ಜುನನ ವಿರುದ್ಧ ಇವರು ಹೋರಾಡಲಾರರು

   ಅ) ಮನುಷ್ಯರು ಆ) ದೇವಾಸುರರು

   ಇ) ದೇವತೆಗಳು ಈ) ಅಸುರರು

3. ಹಾಲಿಗಾಗಿ ಹೊಂಚಿಬರುವ ಕಾಲಿಗೆ ಇಲ್ಲದಿರುವುದು

   ಅ) ಸಪ್ಪಳ ಆ) ಗೆಜ್ಜೆ

   ಇ) ಹೆಜ್ಜೆಗುರುತು ಈ) ಲಜ್ಜೆ

4. ಇದ್ದ ಸಿದ್ಧಕ್ಕಳನ್ನು ಮುಕ್ಕಿದವರು

   ಅ) ಜವರಾಯ ಆ) ಪಾರ್ವ

   ಇ) ತರುಣರು ಈ) ಕಬ್ಬಿಗ

5. 'ಎದ್ದೇಳು ಭಿಕ್ಷುಕನೆ ನನ್ನನ್ನದೊಳೆ ಮುಪ್ಪಿ

   ನಿನಗಿಕ್ಕಿ ಶಿವಪೂಜೆ ಮಾಡುವೆನು. ನೀನೆನ್ನ

   ಸೋದರ, ನೀನೆನ್ನ ದೇಗುಲ!' – **ಇಲ್ಲಿ ದೇವರ ಪೂಜೆ ಎಂದರೆ.**

   ಅ) ಬಡವರಿಗೆ ಹಣ ನೀಡುವುದು

   ಆ) ಹಸಿದವರಿಗೆ ಅನ್ನವಿಕ್ಕುವುದು

   ಇ) ಭಿಕ್ಷುಕರಿಗೆ ಕರುಣೆ ತೋರುವುದು

   ಈ) ಎಲ್ಲರನ್ನೂ ಸೋದರರೆಂದು ಭಾವಿಸುವುದು

II. ಸರಿಯಾದ ಉತ್ತರವನ್ನು ಆಯ್ದು ಖಾಲಿ ಜಾಗ ಭರ್ತಿ ಮಾಡಿ **5x1-5**

6. 'ತನುಜ' ಪದದ ಅರ್ಥ _____

7. 'ನೇಹ' ಪದದ ತತ್ಸಮ ರೂಪ_____

8. 'ಸುರ ' ಪದದ ವಿರುದ್ಧಾರ್ಥಕ ಪದ_____

aglasem.com For more Question Papers, Sample Papers, Notes & Syllabus visit aglasem.com Page 1 of 4

9. ದ್ವಿರುಕ್ತಿಗೆ ಇದು ಉದಾಹರಣೆ_____

10. 'ಇತರೇತರ' ಪದದ ಬಿಡಿಸಿ ಬರೆದ ರೂಪ_____

(ಸ್ನೇಹ, ಅಸುರ, ಮಗ, ಇತರ+ಇತರ, ತೆಗೆತೆಗೆದು, ಜುಳುಜುಳು)

III. ಸರಿಯಾದ ಉತ್ತರವನ್ನು ಆಯ್ದು ಹೊಂದಿಸಿ ಬರೆಯಿರಿ **5x1-5**

11. ಅ. ದಿನಮಣಿ -ಅನೀತಿ

ಆ. ಹೆಜ್ಜೆಯಿಡುವ -ಸುವಾಸನೆ

ಇ. ಕೊಂಡಾಡು -ಕೊಂಡುಕೊಳ್ಳು

ಈ. ನೀತಿ -ಹೆಜ್ಜೆ+ಇಡುವ

ಉ. ಪರಿಮಳ -ಹೊಗಳು

-ಸೂರ್ಯ, ಭಾನು

IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ **5x1-5**

12. ಅರ್ಜುನನು ಯಾವುದರಿಂದ ಶಿವಲಿಂಗವನ್ನು ರಚಿಸಿದನು?

13. ಶಿವ ಪಾರ್ವತಿ ಒಂದಾಗಿ ಎಲ್ಲಿಗೆ ಬಂದರು?

14. ಪರುಷ ಮುಟ್ಟಲು ಯಾವುದು ಕನಕವಾಗುತ್ತದೆ?

15. ಜಲಗಾರ ಯಾವುದನ್ನು ಪರಮ ಪೂಜೆ ಎಂದು ಕರೆಯುತ್ತಾನೆ?

16. ರೈತನಿಗೆ ಏನನ್ನು ತರಲಿಲ್ಲವೆಂದು ಜಲಗಾರ ಕೇಳುತ್ತಾನೆ?

ಆ-ವಿಭಾಗ

V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ **4x2-8**

17. ಇಂದ್ರನು ನೀಳಾಂಜನೆಯ ಪ್ರತಿರೂಪವನ್ನು ಸೃಷ್ಟಿಸಲು ಕಾರಣವೇನು?

18. ಅರ್ಜುನನು ಬೇಡನನ್ನು ಏನೆಂದು ಹೊಗಳಿದನು?

19. ಗಿರಿಜೆಯ ಪ್ರಶ್ನೆಗೆ ಶಿವನು ಏನೆಂದು ಉತ್ತರಿಸಿದನು?

20. ಬಡತನದಲ್ಲಿಯೂ ಮಗಳಿಗೆ ಏನನ್ನು ಕೊಡಬೇಕು?

21. ಕೀಳು ಕಬ್ಬಿಣಕ್ಕೂ ಮಾಯೆಗೂ ಕವಿ ಹೇಗೆ ಹೋಲಿಸಿದ್ದಾನೆ?

VI. ಕೆಳಗಿನ ನಾಲ್ಕು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ **4x3-12**

22. ಸುರಕಾಮಿನಿ ರಂಗದೊಳದೃಶ್ಯಮಪ್ಪುದು

23. ಒರ್ವನೆ ನಿಂದು ಕಾದಿದಯ್

24. ಬಂದರನರಿಯದೆ ಹೋದರನರಿಯದೆ

25. ಚಿಂತಾಮಣಿ ಮಣಿಯಲ್ಲದು

26. ಜಗಕೊಬ್ಬಳೈಸೆ ಸರ್ವಜ್ಞ

VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ **2x4-8**

27. ಅರ್ಜುನನ ಅಹಂಕಾರವನ್ನು ಶಿವನು ಹೇಗೆ ದೂರಮಾಡುತ್ತಾನೆ? ವಿವರಿಸಿ.

28. ತನ್ನ ಕೃತಿಯನ್ನು ಕುರಿತು ಚಾಮರಸನ ಅಭಿಪ್ರಾಯಗಳೇನು?

29. ಸರ್ವಜ್ಞನ ತ್ರಿಪದಿಗಳಲ್ಲಿ ಕಂಡುಬರುವ ಸಾರ್ವಕಾಲಿಕ ಮೌಲ್ಯಗಳನ್ನು ಸಂಗ್ರಹಿಸಿ ಬರೆಯಿರಿ.

30. ಸಂಚಿಯ ಹೊನ್ನಮ್ಮ ನಿರೂಪಿಸಿರುವ ಪತಿಧರ್ಮವನ್ನು ವಿವರಿಸಿ.

VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ **1x4-4**

31. ತನುರೂಪ ವಿಭವಯೌವನ
ಧನ ಸೌಭಾಗ್ಯಯುರಾದಿಗಳ್ಗಿಣೆ ಕುಡುಮಿಂ
ಚಿನ ಪೊಳೆಪು ಮುಗಿಲ ನೆಲಿಲಿಂ
ದ್ರನ ಬಿಲ್ ಬೊಬ್ಬುಳಿಕೆಯುರ್ಬು ಪರ್ಬಿದ ಭೋಗಂ.

32. ಸಿರಿಗೆಯುದಾರತೆ ವಿದ್ಯಾಪರಿಣತೆ
ಗುರೆ ವಿನಯಂ ಬಾಳ್ಮೆಯೆಡೆಗೆ
ಪರಹಿತಮೆಂಬುದು ಪಶ್ಚಿಮ ರಂಗೇಶ
ಪರಮಾಭರಣಮೆನಿಸದೆ.

ಇ-ವಿಭಾಗ

IX. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ **1x2-2**

33. ಕವಿ ಊರನ್ನು ಹೇಗೆ ವರ್ಣಿಸುತ್ತಾರೆ?

34. ನಾಗಿಯು ಬಳುಕಿ ಬಂದಾಗ ಕರು ಮತ್ತು ಹಸುಗಳ ಪ್ರತಿಕ್ರಿಯೆ ಏನು?

X. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ **1x4-4**

35. 'ಬೆಕ್ಕು ಬರುವುದಲ್ಲ ಮಗು ಹಾಲು ಮಡಕೆ ಮುಚ್ಚಿಡು' ಪದ್ಯದ ಈ ಸಾಲುಗಳನ್ನು ಹೆಣ್ಣಿನ ದೃಷ್ಟಿಕೋನದಲ್ಲಿ ವಿವರಿಸಿ.

36. 'ನಾಗಿಯ ಕಥೆ' ಕವನದಲ್ಲಿಯ ಪ್ರಕೃತಿ ವರ್ಣನೆ ಕುರಿತು ಬರೆಯಿರಿ.

ಈ-ವಿಭಾಗ

XI. ಕೆಳಗಿನ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ **2x2-4**

37. ಭಾರತಾಂಬೆಯ ದುರ್ಗತಿಗೆ ಕಾರಣಗಳೇನು?

38. ಶಿವನ ಆಭರಣಗಳು ಯಾವುವು?

39. ಜಲಗಾರ ಶಿವಗುಡಿಯನ್ನು ಏಕೆ ನಿರಾಕರಿಸುತ್ತಾನೆ?

XII. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ **2x3-6**

40. ಹೊಲಗಳ ಬನಗಳ ದೊರೆ ನಾನು

41. ರೈತರೇ ಧರೆಯೊಳಿಹ ಜಂಗಮ ಕಲ್ಪವೃಕ್ಷಗಳು.

42. ಅಂಜದಿರು ಸೋದರನೆ ನಾನಿನ್ನ ಬಂಧು!

XIII. ಕೆಳಗಿನ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ **1x4-4**

43. ಭೂದೇವಿಯ ಉಪಃಕಾಲದ ಚಿತ್ರಣವನ್ನು ಚಿತ್ರಿಸಿ.

44. ನೇಗಿಲ ಯೋಗಿಗೆ ಮುಕ್ತಿ ತೋರುವ ಹಾದಿ ಯಾವುದು? ವಿವರಿಸಿ.

ಉ-ವಿಭಾಗ

XIV. ಕೆಳಗಿನ ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ 1x4-4

45. ಆ ಮಧುರಾಕಾರಲತಾ
ಕೋಮಳೆ ತನಗಾಗಳಾಯುರಂತಂ ಬರೆ ಸೌ
ಧಾಮಿನಿವೊಲ್ ಭೋಂಕನೆ ಸುರ
ಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್

aglasem.com For more Question Papers, Sample Papers, Notes & Syllabus visit aglasem.com Page 3 of 4

46. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ

XV. ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ ಸಮನ್ವಯಗೊಳಿಸಿ. **1x4-4**

47. ಪೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ

    ಪೆಣ್ಣಲ್ಲವೆ ನಮ್ಮನೆಲ್ಲ ಪೊರೆದವಳು

48. ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.